Regd No M 1229 | 43rd Year | Sri 'Satyavadi' Mysore | 10—4—1959

ಸ್ವಮುಖ ವರ್ತಮಾನಗಳಿಗೆ
ಅಕರ್ಮಣೀಯ [illegible]ಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು- ಅಂಮನೆ ಸಂಸ್ಥೇದಾರ್ ಎಂ. ವಿ ಸುಬ್ಬಂಕಯ್ಯನವರು [ಬಿಡಿ ಪ್ರತಿ 3ಪೈ

Protectthecow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ವಂಶಪಾರಂಪರ್ಯ ಗ್ರಾಮಾಧಿಕಾರಿ ಪದ್ಧತಿ ರದ್ದು

ಗ್ರಾಮಾಧಿಕಾರಿಗಳು

ಬೆಂಗಳೂರು— ಮೈಸೂರು ರಾಜ್ಯದ ಕೆಲ ಭಾಗಗಳಲ್ಲಿರುವ ವಂಶವಾರಾಪರ್ಯ ಗ್ರಾಮಾಧಿಕಾರಿ ಪದ್ಧತಿಯನ್ನು ವಜಾಮಾಡಲು ಬುಧವಾರ ನಡೆದ ಮಂತ್ರಿಮಂಡಲ ಸಭೆಯಲ್ಲಿ ನಿರ್ಧರಿಸಲಾಯಿತೆಂದು ತಿಳಿಯಬಂದಿದೆ.

ಕಾಂಗ್ರೆಸಿಗರ ಕಾರ್ಯ

ಬೊಂಬಾಯಿ 8— ಕಾರ್ಪೊರೇಷನ್ನಿನ ಮಾಜಿ ಮೇಯರರ ಸೇವೆಯನ್ನು ಪ್ರಶಂಸಿಸುವ ಠರಾವನ್ನು ಕಾಂಗ್ರೆಸ್ಸು ಪಕ್ಷವು ವಿರೋಧಿಸಿತು : ಆದರೂ ಠರಾವು ಪಾಸಾಯಿತು — ಈ ರೀತಿ ವಿರೋಧ ಪಕ್ಷವು ಇಂತಹ ಠರಾವನ್ನು ವಿರೋಧಿಸಿರುವುದು ಬೊಂಬಾಯಿ ಕಾರ್ಪೊರೇಷನ್ನಿನ ಇತಿಹಾಸದಲ್ಲೇ ಇದು ಪ್ರಪ್ರಥಮವಾಗಿದೆ.

ಬೆಂಗಳೂರು 7— ಇಲ್ಲಿಯ ರಾಮಸೇವಾ ಮಂಡಲಿಯು ತಾ|| 17 ರಿಂದ 13 ದಿವಸಗಳು ನಡೆಸಿರುವ ಸಂಗೀತ ಉತ್ಸವದ ಪಾರಂಭೋತ್ಸವವನ್ನು , ಭಾರತದ ಉಪಾಧ್ಯಕ್ಷ ಡಾ || ರಾಧಾಕೃಷ್ಣನ್ ನೆರವೇರಿಸುವರೆಂದು ತಿಳಿಯಬಂದಿದೆ.

ಖಟಮಂಡು 6— ಚುನಾವಣೆಯಲ್ಲಿ ಯುನೈಟೆಡ್ ಡೆಮೊಕ್ರಾಟಿಕ್ ಪಕ್ಷದ ಸದಸ್ಯರೂ ಮತ್ತು ನೇಪಾಳದ ಮಾಜಿ ಮುಖ್ಯ ಮಂತ್ರಿಯವರೂ ಆದ ಡಾ || ಕೆ ಐ ಸಿಂಗ್ ಸೋತುಹೋದರು.

ಹುಬ್ಬಳ್ಳಿ 7— ಗಾಂಧೀ ನಗರದ ಭಾಗದಲ್ಲಿ 144 ನೇ ವಿಧಿಯು ಮತ್ತೆ 1 ಪಕ್ಷ ಮುಂದುವರಿಸಲಾಗಿದೆ.

ಮೆಷಿಗನ್ನಿನ ಹೊಡೆತ

ಪ್ಯಾರಿಸ್ 7— ರಾತ್ರಿ ೭ ಪೋಲೀಸು ಸ್ಟೇಷನ್ನುಗಳ ಮೇಲೆ ಎಷ್ಟ ಗ್ಗಳ ಕಾರ್ಯಾಚರಣೆ ನಡೆಯಿತು — ಇದು ಉತ್ತರ ಆಫ್ರಿಕಾದವರ ಕೆಲಸವೆಂದು ಪೋಲೀಸರ ನಂಬಿಕೆಯಾಗಿದೆ.

ಭಾರತಕ್ಕೆ ಅಪಾಯಕರ !

ಕಲ್ಕತ್ತ 8— ಭಾರತ ಕಮ್ಯುನಿಸ್ಟು ಪಾರ್ಟಿಯು, ಪಶ್ಚಿಮ ಬಂಗಾಳಾ ಸಂಮೇಳನದಲ್ಲಿ ಅಮೇರಿಕಾ-ಪಾಕಿಸ್ತಾನ ಮಿಲಿಟರಿ ಒಪ್ಪಂದವನ್ನು ಖಂಡಿಸಿ, ಇದು ಭಾರತದ ಸ್ವಾತಂತ್ರ್ಯ, ರಕ್ಷಣೆ, ಸ್ವಾಮಿತ್ವಕ್ಕೆ ಶಂಕೆ ಉಂಟುಮಾಡಬಹುದಾಗಿದೆಯೆಂದು ನಿರ್ಣಯಿಸಲಾಯಿತು.

ಮೊಮ್ಮಗಳಿಗೆ ಒಂಟೆ

ಅಮೇರಿಕಾದ ಮಾಜಿ ಅಧ್ಯಕ್ಷ ಶ್ರೀ ಸ್ವೆಲ್ಟರ ಪತಿಯು ಇಸ್ರೇಲಿನಲ್ಲಿ ತನ್ನ ಮೊಮ್ಮಗಳಿಗಾಗಿ ಕೊಂಡುಕೊಂಡಿರುವ ಒಂಟೇಮರಿಯನ್ನು ಅಮೇರಿಕಾಕ್ಕೆ ಆಮದು ಮಾಡಿಕೊಳ್ಳಲು ಅಪ್ಪಣೆ ಕೊಡಲಾಗಿದೆ.

ಆಚಾರ್ಯ ಭಾವೆಯವರು ಪಂಜಾಬಿನ ಕಾರ್ಯಕ್ರಮಾನಂತರ ಕಾಶ್ಮೀರದಲ್ಲಿ ನಾಲ್ಕು ತಿಂಗಳ ಪಾದಯಾತ್ರೆ ನಡೆಸುವರು — ಡಮ್ಮುವನ್ನು ಜೂನ್ 7 ಲ್ಲಿ ಶ್ರೀನಗರವನ್ನು ಜುಲೈ 14 ರಲ್ಲೂ ತಲಪುವರು.

ವಾಷಿಂಗ್ಟನ್ 8 — ಬೊಂಬಾಯಿ ರಾಜ್ಯದಲ್ಲಿ ಕೋಯಿನ ಹೈಡ್ರೋ ಎಲೆಕ್ಟ್ರಿಕ್ ಪಾಜೆಕ್ಟಿಗೆ ವಿಶ್ವಬ್ಯಾಂಕು 25 ಮಿಲಿಯ ಡಾಲರು ಸಾಲವಿತ್ತಿದೆ.

ಎಂ ಪಿ ಗಳ ಭೀತಿ

ನವದೆಹಲಿ 8— ಪಾಕಿಸ್ತಾನಕ್ಕೆ ಅಮೇರಿಕಾ ಹೆಚ್ಚೆಚ್ಚು ಶಸ್ತ್ರಾಸ್ತ್ರ ಒದಗಿಸುತ್ತಿರುವ, ಮತ್ತು ಆಗಾಗ ಗಡಿ ಅತಿಕ್ರಮಣ ನಡೆಯುತ್ತಿರುವ ಮತ್ತು ಟಿಬೆಟ್ಟಿನ ಈಚಿನ ಸಮಸ್ಯೆಗಳ ಬಗ್ಗೆ ಅನೇಕ ಪಾರ್ಲಿಮೆಂಟು ಸದಸ್ಯರು ಲೋಕಸಭೆಯಲ್ಲಿ ಶಂಕೆ ಸೂಚಿಸಿದರು

ಕೇರಳದಲ್ಲಿ ಕನ್ನಡ

ಕೇರಳದಲ್ಲಿ ಕನ್ನಡ ಮಾಧ್ಯಮಿಕದ ಸ್ಕೂಲುಗಳಿಗೆ ಕನ್ನಡ ಪಠ್ಯಪುಸ್ತಕಗಳನ್ನು ಆರಿಸಲು ಒಂದು ಸಮಿತಿಯನ್ನು ಕೇರಳ ಸರಕಾರ ನೇಮಿಸಿದೆ.

ಸೇಲಂ 7— ಸೆಕ್ಷನ್ 144 ಇಲ್ಲಿ ಒಂದು ತಿಂಗಳ ಕಾಲ ವಿಧಿಸಲಾಗಿದೆ.

ಪಿಲಾಂಗ್ 8— ಡಲ್ಯಾಲಾಮಾರು ಟಿಬೆಟಾಂಗಿನಿಂದ ಪ್ರಯಾಣ ಮುಂದುವರಿಸಿದರು : ಅವರು ಮುಸ್ಸೂರಿಯಲ್ಲಿ ನೆಲೆಸುವರೆಂದು ವಂದಿಯಾಗಿದೆ.

ನವದೆಹಲಿ 8 — ಟಿಬೆಟ್ಟಿನಿಂದ ಸಿಕ್ಕಿಂ ಮತ್ತು ಇಂಡಿಯಾಕ್ಕೆ ಒಸ್ಮೆಯನ್ನು ಚೈನಾ ಸರ್ಕಾರ ನಿರ್ಮಿಸುತ್ತಿರುವುದೆಂಬ ವಿಷಯದ ಬಗ್ಗೆ ಭಾರತ ಸರ್ಕಾರಕ್ಕೆ ನಿರ್ದಿಷ್ಟ ವರ್ತಮಾನ ಬಂದಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಎರ್ನಾಕುಲಂ 6— ಕೇರಳದಲ್ಲಿ ಕಮ್ಯುನಿಸ್ಟರ ಸರಕಾರದ 2 ನೇ ವಾರ್ಷಿಕೋತ್ಸವವು ವೈಭವವಾಗಿ ನೆರವೇರಿತು — ಸಂವಾರ ವೈದಾನದಲ್ಲಿ ಸಭೆ ಭಾಷಣಗಳಾದವು — ಅದಕ್ಕೆ ಮುಂಚೆ ಮುಖ್ಯ ಬೀದಿಗಳಲ್ಲಿ ಕಮ್ಯುನಿಸ್ಟ್ ಪಾರ್ಟಿ ಮೆರವಣಿಗೆ ನಡೆಯಿತು.

ನಾಳೆಯ ಪಂಚಾಂಗ

ಅ|| ಮಹಾವಿದ್ವಾನ್ ದೈವಜ್ಞಶಿಖಾಮಣಿ ಸಂಪಕ್ಕೃಷ್ಣ ಜೋಯಿಸರಿಂದ

11 ಶನಿವಾರ ಶದಿಗೆ ಕೃತಿಕ

ದೇವ - ರಾಜ

ಲಂಡನ್ 8— ಡಲ್ಯಾಲಾಮಾರವರು ಭದಂತಕ್ಕೆ ತಲಪಿದ ಮಾರನೇ ದಿನ ಹಿಮಾಲಯವನ್ನು ಒಂದು ಏಕಾಂದಿಂದ ದಟ್ಟವಾಗಿ ಕವಿದಿದ್ದ ಮಂಜು ಕರಗಿ ಹೋಯಿತು — ಹಾಗಿನ್ನ ಮಂಜು ಡಲ್ಯಾಲಾಮಾರನ್ನು ಚೈನೀ ಕಮ್ಯುನಿಸ್ಟರು ಬೆನ್ನಟ್ಟಿ ಬರುತ್ತಿದ್ದುದನ್ನು ಅಡ್ಡಿಪಡಿಸಿತು ; ಹೀಗಾಗದಿದ್ದರೆ ಡಲಾಮಾರು ಅವರ ಕೈಗೆ ಸಿಕ್ಕಿಬೀಳುವ ಸಂಭವವಿದ್ದಿತು — ಟಿಬೆಟ್ಟಿನ ಡಲಾಮಾರು ಹವಾಮಾನವನ್ನು ಹತೋಟಿಯಲ್ಲಿರುವ ಶಕ್ತಿ ಹೊಂದಿರುವರೆಂಬ ಪ್ರತೀತಿ ಇದೆ — ಡಲ್ಯಾಲಾಮಾರು ತಪ್ಪಿಸಿಕೊಂಡು ಬರಲು ಈ ಶಕ್ತಿ ಉಪಯೋಗಿಸಲ್ಪಟ್ಟಿರುವದೆಂದು ಊಹಿಸಲಾಗಿದೆ; ದೇವರಾಜ !

ಪ್ರಶಸ್ತಿ ವಿತರಣೆ

ನವದೆಹಲಿ 8— ರಿಪಬ್ಲಿಕ್ ಡೇ ದಿವಸ ಕೊಡಲಾದ ರಾಷ್ಟ್ರ ಪ್ರಶಸ್ತಿಯನ್ನು ಅಧ್ಯಕ್ಷ ಡಾ|| ಪ್ರಸಾದರು ರಾಷ್ಟ್ರ ಭವನದ ದರ್ಬಾರು ಹಾಲಿನಲ್ಲಿ ಇತ್ತರು — ಪದ್ಮಭೂಷಣ ಪದಕವು ಎವರೆಸ್ಟು ವಿಜಯಿ ಟೆನ್ಸಿಂಗರಿಗೂ, ಪದ್ಮಶ್ರೀ ಪದಕವು ಇಂಗ್ಲೀಷು ಕಡಲ್ಗಾಲುದಾರ್ಯಲ್ಲಿ ಇಂಗ್ಲೆಂಡಿನಿಂದ ಫ್ರಾನ್ಸಿಸ್ನವರಿಗೆ ಹಾರಿದ ಬ್ಯಾರಿಸ್ಟರು ಮಹಿಂದ್ರಕುಮಾರ ಸೆನ್ನವರಿಗೂ ದೊರೆಯಿತು — ಈ ಸಾರಿ ಭಾರತರತ್ನ ಪ್ರಶಸ್ತಿ ಪಡೆದವರ್ಯಾರೂ ಇರಲಿಲ್ಲ — ಈ ಸಾರಿ ಭಾರತರತ್ನ ಪ್ರಶಸ್ತಿ ಪಡೆದವರ್ಯಾರೂ ಇಲ್ಲ — ಈ ಪ್ರಶಸ್ತಿಗಳು 1954 ರಲ್ಲಿ ಚಾಲ್ತಿಗೆ ಬಂದಲ್ಲಿಗೆ ಕಳೆದಾರಿದ್ದು — 8 ಭಾರತರತ್ನ, 15 ಪದ್ಮವಿಭೂಷಣ, 91 ಪದ್ಮಭೂಷಣ, 91 ಪದ್ಮಶ್ರೀ. ಒಟ್ಟು 200 ಪ್ರಶಸ್ತಿಗಳು ಕೊಡಲಾಗಿದೆ.

ವೆಲಿಂಗ್ಟನ್ 8— ರಹಸ್ಯವಾಗಿ ನಡೆದ ಪ್ರಥಮ ಸೀಟೋ ಸಮ್ಮೇಳನದಲ್ಲಿ ಪಾಕಿಸ್ತಾನವು ಕಾಶ್ಮೀರ ಪ್ರಶ್ನೆ ಎತ್ತಿ [illegible] ತಿಳಿಯಬಂದಿದೆ.

ಹೊಸ ಮನೋಭಾವ

ಇಡೀ ರಾಷ್ಟ್ರ ಇಂದು ಸಮತಾವಾದಿ ಸಮಾಜದ ನಿರ್ಮಾಣದ ಕಡೆ ಸಾಗುತ್ತಿದೆ; ಇದುವರೆಗೆ ಕೇವಲ ವಿಶಿಷ್ಟರ ಅಥವಾ ಶ್ರೀಮಂತರ ಸ್ವತ್ತಾಗಿದ್ದ ಸುಖಸಂತೋಷಾದಿಗಳು ಪ್ರತಿಯೊಬ್ಬರ ಪ್ರಜೆಗೂ ದೊರೆಯಬೇಕೆಂದು ಸರ್ಕಾರದ ಆಶಯ; ಸರ್ಕಾರದ ಈ ಬಯಕೆ ಈಡೇರಬೇಕಾದರೆ ಒಂದು ನೂತನ ಸಮಾಜವನ್ನು ನಿರ್ಮಿಸಬೇಕಾದುದು ಅನಿವಾರ್ಯ : ಹೊಸ ಸಮಾಜ ಕಟ್ಟಲು ಪ್ರತಿಯೊಬ್ಬರೂ ಶ್ರಮಿಸಬೇಕು — ಸ್ವರಾಜ್ಯದ ಲಾಭ ಕೇವಲ ಒಂದು ರಾಜ್ಯಕ್ಕೆ ಅಥವಾ ಆ ರಾಜ್ಯದ ದೊಡ್ಡ ದೊಡ್ಡ ನಗರಗಳಿಗೆ ಮಾತ್ರ ಆದರೆ ಸಾಲದು : ಅದಂ ಪ್ರಯೋಜನ ಅಥವ ಲಾಭ ರಾಜ್ಯದ ಅಥವಾ ರಾಷ್ಟ್ರದ ಯಾವುದೇ ಮೂಲೆಯಲ್ಲಿರುವ ಹಳ್ಳಿಯ ಸಾಮಾನ್ಯ ಪ್ರಜೆಗೂ ಆಗಬೇಕು ; ಒಮ್ಮೆಲೇ ನಾವು ಜನರಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸಲಾಗದಿದ್ದರೂ ಕ್ರಮಕ್ರಮೇಣ ಹಳ್ಳಿಯ ಜನರಿಗೆ ಅತ್ಯಾವಶ್ಯಕವಾಗಿ ದೊರೆಯಬೇಕಾದ ಶುಚಿಯಾದ ಕುಡಿಯುವ ನೀರಿನ ಬಾವಿ, ಜನಸಂಖ್ಯೆಗೆ ತಕ್ಕಂತೆ ನಮ್ಮ ಭಾವಿ ಪೀಳಿಗೆ ಆಕ್ಷರಸ್ಥರಾಗಲು ಅನುಕೂಲವಾಗುವಂತೆ ಪಾಠಶಾಲೆಗಳ ನಿರ್ಮಾಣ ಮತ್ತು ಹಳ್ಳಿಯ ರೈತರು ಬೆಳೆಯುವ ವ್ಯವಸಾಯೋತ್ಪನ್ನ ಪದಾರ್ಥಗಳ ಮಾರಾಟಕ್ಕೆ ಅನುಕೂಲವಾದ ರೀತಿಯಲ್ಲಿ ಸಂಪರ್ಕ ಅಂದರೆ ರಸ್ತೆಯ ನಿರ್ಮಾಣ, ಈ ಮೂರೂ ಅಗತ್ಯವಾಗಿ ಆಗಲೇ ಬೇಕು : ಈ ಎಲ್ಲ ಸೌಕರ್ಯಗಳನ್ನೂ ಒದಗಿಸಲು ಅನುಕೂಲವಾಗುವಂತೆ ನಮ್ಮ ತೃತೀಯ ಯೋಜನೆಯನ್ನು ರೂಪಿಸಬೇಕಾಗುತ್ತದೆ : ಈ ನಮ್ಮ ಬಯಕೆ ಈಡೇರ ಬೇಕಾದರೆ ರಾಷ್ಟ್ರದ ಉತ್ಪನ್ನ ಹೆಚ್ಚಬೇಕು ; ಜನತೆ ಶ್ರಮಿಸಿದೆ ಉತ್ಪನ್ನ ಹೆಚ್ಚುವುದು ಶಕ್ಯವಿಲ್ಲ ; ಜನರು ತಮ್ಮ ಹಾಗೂ ತಮ್ಮ ಕುಟುಂಬ ವರ್ಗಕ್ಕಾಗಿ ಈಗ ದುಡಿಯುತ್ತಿರುವ ಆರು ಅಥವಾ ಎಂಟು ಗಂಟೆಗಳ ಜೊತೆಗೆ ಇನ್ನೂ ಒಂದೆರಡು ಗಂಟೆ ಹೆಚ್ಚಾಗಿ ದುಡಿಯುವೆ ಮನೋಭಾವ ಬೆಳಕಿಸಿಕೊಳ್ಳಬೇಕು ; ನಮ್ಮ ಜನರೆಲ್ಲಾ ಹೀಗೆ ದುಡಿದರೆ ನಮ್ಮ ರಾಷ್ಟ್ರದ ವರಮಾನ ಹೆಚ್ಚಿ ನಮ್ಮ ರಾಮರಾಜ್ಯದ ಕಲ್ಪನೆ ಕಾರ್ಯರೂಪಗತ ವಾಗುತ್ತದೆ— ಎಂದು ಮುಂತಾಗಿ ಕೃಷ್ಣರಾಜನಗರದ ಯುವಕ ಸಂಘದ ವತಿಯಲ್ಲಿ ಬಯಲು ರಂಗಮಂಟಪದ ಶಂಕುಸ್ಥಾಪನಾ ಸಮಾರೋಹವನ್ನು ಕೆಲವು ದಿವಸಗಳ ಹಿಂದೆ ಮುಖ್ಯ ಮಂತ್ರಿಗಳಾದ ಶ್ರೀ ಬಿ. ಡಿ. ಜತ್ತಿಯವರು ಹೇಳಿದರು.

ಅನಂತರ ಮುಖ್ಯ ಮಂತ್ರಿಗಳು ಯುವಕ ಸಂಘದವರು ತಮಗೆ ಅರ್ಪಿಸಿದ ಬೆಳ್ಳಿಯ ಕಂಡಿಗೆಯನ್ನು ಸ್ಥಳದಲ್ಲಿಯೇ ಹರಾಜು ಮಾಡಿಸಿ ಅದರಿಂದ ಬಂದ 400 ರೂಗಳನ್ನು ರಂಗಮಂಟಪದ ನಿರ್ಮಾಣಕ್ಕೆ ಕೊಟ್ಟರು. (ಮೈ. ವಾಣಿ)

Both for the child and the mother ...

Here is a rich, palatable, nutritive, vitamin-fortified food that children will love and thrive on! For nursing and expectant mothers too, this is ideal!

EXTRACT of MALT with COD LIVER OIL

TRADE MARK

THE MYSORE INDUSTRIAL & TESTING LABORATORY LTD. BANGALORE-3.

Madras Sales Office:- 35/37, THAMBU CHETTY STREET, MADRAS-1.

Our Bangalore Sales Depot address—

71/4 Arcot Sreenivasachar St., Bangalore 2.

ಅಪೆರಾ— ಜಯಪ್ರದ 2 ನೇ ವಾರ

ಸಕಲರೂ ನೋಡಬೇಕಾದ ಮಹೋನ್ನತ ಸಾಂಸಾರಿಕ ಚಿತ್ರ

ಸತೀ ತುಳಸಿ ತೆಲುಗು

ಪಾತ್ರ— ಎಸ್ ವರಲಕ್ಷ್ಮಿ, ಕೃಷ್ಣಕುಮಾರಿ, ಅಮರನಾಥ್, ಗುಮ್ಮಡಿ

ಪ್ರತಿದಿನ 3 ಆಟಗಳು

ವುಡ್‌ಲಾಂಡ್ಸ್ ಜನಭರಿತ 2 ನೇ ವಾರ

ಯುಲ್. ಬಿ. ಫಿಲ್ಮ್ಸ್‌ರವರ

ಅನಾಡಿ

(ಹಿಂದಿ)

ತಾರಾಗಣ— ನೂತನ್, ರಾಜ್ ಕಪೂರ್

ಮೋತೀಲಾಲ್, ಶುಭಾ ಕೊಠೆ

ದಿಗ್ದರ್ಶನ : ಋಷಿಕೇಷ್ ಮುಖರ್ಜಿ

ಸಂಗೀತ : ಶಂಕರ್ ಜೈಕಿಶನ್

ಬಹು ದಿನಗಳಿಂದ ಎದುರುನೋಡುತ್ತಿದ್ದ ಈ ಚಿತ್ರವನ್ನು ನೋಡಲು ಮರೆಯಬೇಡಿ

[ದಿನವಹಿ 3 ಪ್ರದರ್ಶನಗಳು]

SHAKTI SUDHA

A Superb Tonic

Sri 'SATYAVADI' Daily

Oldest Newspaper in the State ; Splendid Advertiser

Advertisement Tariff

Casual	Rs 1-50 per inch
2 insertions and above	1-25
Contract above 100 inches	1-00
500	0-75

Column length 12½ inches ; width 2 inches; 4 columns to a page.

The decision of the management is final in all matters.

Manager "Satyavadi", Chamarajpuram, Mysore

Edited, Printed & Published by Dharma Prachara Nirata M. S Krishna Rao, at the Satyavadi Press Chamarajapuram, Mysore.